
## ಕೆ.ಎನ್. ಗಣೇಶಯ್ಯ



ಚಿತ್ರ: ಡಿ.ಸಿ. ನಾಗೇಶ್

ಕತೆಗಾರ, ಕಾದಂಬರಿಕಾರ ಕೆ.ಎನ್. ಗಣೇಶಯ್ಯ ಮೂಲತಃ ಕೃಷಿವಿಜ್ಞಾನಿ. ಕೋಲಾರ ಜಿಲ್ಲೆಯವರು. ಇತಿಹಾಸ, ವಿಜ್ಞಾನ ಹಾಗೂ ವರ್ತಮಾನವನ್ನು ತಮ್ಮ ಕೃತಿಗಳಲ್ಲಿ ಬೆಸೆಯುತ್ತ ಗಣೇಶಯ್ಯ ಕುತೂಹಲಕಾರಿ ಕಥಾಹಂದರ ಇರುವ ಕತೆ, ಕಾದಂಬರಿಗಳನ್ನು ಬರೆದಿದ್ದಾರೆ. 200ಕ್ಕೂ ಹೆಚ್ಚು ವೈಜ್ಞಾನಿಕ ಪ್ರಬಂಧಗಳು ಮತ್ತು ಆರು ವೈಜ್ಞಾನಿಕ ಪುಸ್ತಕಗಳ ಲೇಖಕ. 'ಶಾಲಭಂಜಿಕೆ', 'ಪದ್ಮಪಾಣಿ', 'ನೇಹಲ', 'ಸಿಗೀರಿಯ', 'ಮಿಹಿರಾ ಕಲ', 'ಕಲ್ದವಸಿ', 'ಪೆರಿನಿ ತಾಂಡವ' (ಕಥಾಸಂಕಲನಗಳು), 'ಕನಕಮುಸುಕು', 'ಕರಿಸಿರಿಯಾನ', 'ಕಪಿಲಿಪಿಸಾರ', 'ಚಿತಾದಂತ', 'ಏಳು ರೊಟ್ಟಿಗಳು', 'ಮೂಕಧಾತು', 'ಶಿಲಾಕುಲ ವಲಸೆ', 'ಬಳ್ಳಿಕಾಳ ಬೆಳ್ಳಿ' (ಕಾದಂಬರಿಗಳು), 'ಭಿನ್ನೋಟ', 'ಭಿನ್ನ ಬಿಂಬ', 'ವಿ–ಚಾರಣ' ಸೇರಿದಂತೆ ಅವರ 18 ಪುಸ್ತಕಗಳು ಪ್ರಕಟವಾಗಿವೆ.

ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಅದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯಲಿದ್ದಾರೆ. ಕಥೆಯ ತಂತ್ರ ಮತ್ತು ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಪುಟಗಳಲ್ಲಿ ದಾಖಲಾಗಲಿದೆ